ಅವರೇ ಏಲಕ್ಕಿಯನ್ನು ತೆಗೆಸುತ್ತಿದ್ದಾರೆ. ಇದರಿಂದಾಗಿ ಮೇಲ್ಕಂಡ ಏಲಕ್ಕಿ ಮಲೆಗಳನ್ನು ಸಾಗು ಮಾಡುತ್ತಿದ್ದವರಿಗೆ ಕೆಲಸ ಇಲ್ಲದಂತಾಗಿದೆ. ಅಲ್ಲದೆ ಏಲಕ್ಕಿ ಬೆಳೆ ಸಂಪೂರ್ಣವಾಗಿ ಸರಕಾರಕ್ಕೆ ತಲಪುವ ಭರವಸೆ ಇಲ್ಲದಿರುವುದರಿಂದ ಕೂಡಲೇ ಈ ಬಗ್ಗೆ ಕ್ರಮ ತೆಗೆದುಕೊಂಡು ಮೊದಲು ನಡೆಯುತ್ತಿದ್ದಂತೆಯೇ ವ್ಯವಸ್ಥೆ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸಿ ಈ ಬಗ್ಗೆ ಹೇಳಿಕೆ ನೀಡುವಂತೆ ಸೂಚನೆ ನೀಡಲಾಗಿದೆ.

ಶ್ರೀ ಬಿ. ಎ. ಜೀವಿಜಯ (ಅರಣ್ಯ ಖಾತೆಯ ರಾಜ್ಯ ಸಚಿವರು),—

ಅಧ್ಯಕ್ಷರೆ, ಈಗ ಸನ್ಮಾನ್ಯ ಸದಸ್ಯರು ಗಮನ ಸೆಳೆಯುವ ಸೂಚನೆಯನ್ನು ಮಂಡಿಸಿದ್ದಾರೆ. ಕೊಡಗಿನಲ್ಲಿ ಗೇಣಿ ಮಲೆ ಅರಣ್ಯ ಇದೆ. ಅದರಲ್ಲಿ ೨೧ ವರ್ಷದವರೆಗೆ ಗುತ್ತಿಗೆ ಕೊಟ್ಟಿದ್ದರು. ಒಪ್ಪಂದದ ಪ್ರಕಾರ ೨೧ ವರ್ಷದ ಮೇಲೆ ಕೊಡುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಸಂಬಂದಪಟ್ಟ ಗೇಣಿದಾರರನ್ನು ಸರ್ಕಾರ ಕರೆದು ಚರ್ಚೆ ಮಾಡಿ ಇನ್ನೊಂದು ೨೧ ವರ್ಷದ ವರೆಗೆ ಕೊಡುವುದಕ್ಕೆ ನಿರ್ಣಯ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದೇವೆ. ಇದೂ ಅಲ್ಲದೆ ಕೆಲವು ಅರಣ್ಯ ಜಮೀನು ಬೇರೆ ರಾಜ್ಯದವರಿಗೆ ಗುತ್ತಿಗೆಗೆ ಕೊಟ್ಟಿರುವುದನ್ನು ರದ್ದುಪಡಿಸಿ ಸ್ಥಳೀಯರಿಗೆ ೨೧ ವರ್ಷದವರೆಗೆ ಗುತ್ತಿಗೆಗೆ ಕೊಡುವುದಕ್ಕೆ ಗುತ್ತಿಗೆಯನ್ನು ನವೀಕರಣ ಮಾಡಲು ಸರ್ಕಾರ ಸದ್ಯದಲ್ಲೇ ನಿರ್ಧಾರ ಮಾಡುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಬೊಮ್ಮಾಯಿಯವರು ಇಲ್ಲಿಲ್ಲ.

ಅಧ್ಯಕ್ಷರು.—ನಿಮ್ಮ ಸೂಚನೆಯನ್ನು ಓದಿ ಹೇಳಿ?

ವಿಧಾನಸಭೆ ನಡೆಯುವಾಗ ಟ್ರಿಬ್ಯುನಲ್ ಮೀಟಿಂಗ್ ಇಡದಿರಲು ಸೂಚನೆ

ಶ್ರೀ ಎಸ್. ಬಂಗಾರಪ್ಪ.—ಸದನದಲ್ಲಿ ಈ ವಿಚಾರ ಅನೇಕಸಾರಿ ಬಂದಿದೆ. ಸದನ ನಡೆಯುವಾಗ ಟ್ರಿಬ್ಯುನಲ್ ಮೀಟಿಂಗ್ ಇಡಬಾರದು ಎಂಬ ಬಗ್ಗೆ ಚರ್ಚೆ ಆಗಿದೆ. ಏಕೆಂದರೆ ಸದನದ ಸದಸ್ಯರು ಇಲ್ಲೂ ಸದಸ್ಯರಾಗಿದ್ದು ಅಲ್ಲೂ ಸದಸ್ಯರಾಗಿರುವುದರಿಂದ ಅವರ ಹಕ್ಕಿಗೆ ಚ್ಯುತಿ ಉಂಟಾಗುತ್ತದೆ. ಅಲ್ಲಿ ಮೀಟಿಂಗ್ ಅಟೆಂಡ್ ಮಾಡಿಂವುದಕ್ಕಾಗುವುದಿಲ್ಲ. ಇದು ಪ್ರಿವಿಲೈಜ್ ಮ್ಯಾಟರ್ ಕೂಡ ಆಗುತ್ತದೆ. ಆದರೂ ನಾವು ಆ ಬಗ್ಗೆ ಸೂಚನೆ ಕೊಡುವುದಕ್ಕೆ ಹೋಗಿಲ್ಲ.

ಶ್ರೀ ಎಂ. ರಘುಪತಿ.—ಮಾನ್ಯ ಕಂದಾಯ ಮಂತ್ರಿಗಳಿಗೆ ಹೇಳಿ ಅಸೆಂಬ್ಲಿ ಇರುವಾಗ ಟ್ರಿಬ್ಯುನಲ್ಸ್ ಮೀಟಿಂಗ್ ಇಡಬಾರದು ಎಂದು ಆದೇಶ ಕೊಡಿಸುತ್ತೇವೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ, ನನ್ನದೊಂದು ಷಿಷಿಳಿರ ನೋಟೀಸ್ ಇತ್ತು. ಅದು ಬರಲಿಲ್ಲ.

ಅಧ್ಯಕ್ಷರು.—ಇವತ್ತು ೧೪ ಇತ್ತು.

ಶ್ರೀ ಪಂಪಾಪತಿ.—ಇವೊತ್ತು ಬರುತ್ತದೆಂದು ಅಧಿಕಾರಿಗಳು ಹೇಳಿದ್ದರು.

ಅಧ್ಯಕ್ಷರು.—ಆ ಪೆಲೇ ನೋಡೋಣ ಕುಳಿತುಕೊಳ್ಳಿ. ವಿಕ್ರಮ್ ನೀವು ಆ ರೀತಿ ಹೇಳಬಾರದು.

ಶ್ರೀ ಪಂಪಾಪತಿ.—ಸಿನಿಮಾ ಥಿಯೇಟರ್ ಮುಚ್ಚಿ ಲಕ್ಷಾಂತರ ರೂಪಾಯಿಗಳು ನಷ್ಟವಾಗುತ್ತಿದೆ. ಕಾರ್ಮಿಕರಿಗೆ ತೊಂದರೆಯಾಗುತ್ತಿದೆ. ಅವರ ಬೇಡಿಕೆ ನ್ಯಾಯವಾದುದು.

ಅಧ್ಯಕ್ಷರು.—ನಿಮ್ಮ ಸೂಚನೆ ಬರದಿದ್ದರೆ, ತೊಂದರೆಯಾಗಿದ್ದರೆ ನನ್ನ ಹತ್ತಿರ ಬಂದು ಹೇಳಿ. ನಾಳೆ ದಿವಸ ಮುತ್ತ ಆ ವಿಷಯವನ್ನು ಇಡಿಸೋಣ.

ಶ್ರೀ ಪಂಪಾಪತಿ.—ಇಲ್ಲೇನೋ ನಡೆಯುತ್ತಿದೆ,

ಅಧ್ಯಕ್ಷರು.—ಹಾಗಂದರೇನು ಅರ್ಥ?

ಶ್ರೀ ಪಂಪಾಪತಿ.—ಅಧಿಕಾರಿಗಳು ನಮಗೆ ಕಳುಹಿಸಿದ್ದೇವೆ, ಇವೊತ್ತು ಬರಂತ್ತದೆ ಎಂದು ಹೇಳುತ್ತಾರೆ. ತಾವು ಇಲ್ಲ ಎಂದರೆ ಹೇಗೆ?

ಅಧ್ಯಕ್ಷರು.—ನಾವು ನೀವು ಕೂಡಿ ನೋಡೋಣ ಆಮೇಲೆ ಬನ್ನಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಒಂದೇ ಒಂದು ಮಾತು ಅಧ್ಯಕ್ಷರೆ. ನಿನ್ನೆ ದಿವಸ ಇದು ಪ್ರಸ್ತಾಪವಾದಾಗ.....

(ಗೊಂದಲ)

ಅಧ್ಯಕ್ಷರು.—ಇಬ್ಬರೂ ಮಾತನಾಡಿದರೆ ಯಾರದನ್ನು ರೆಕಾರ್ಡ್ ಮಾಡಬೇಕು?

ಶ್ರೀ ಪಂಪಾಪತಿ.—ನಾನು ಶಿಷಿಳರ ಪ್ರಕಾರ ಸೂಚನೆ ಕೊಟ್ಟು ಆಫೀಸಿನಲ್ಲಿ ಹೋಗಿ ಕೇಳಿದೆ. ಅಧಿಕಾರಿಗಳು ಟೈಪಾಗಿದೆ, ಇವೊತ್ತು ಬರುತ್ತದೆ ಎಂದು ಹೇಳಿದ್ದರು. ಆದರೆ ಇದು ಬರದೇ ಇರಬೇಕಾದರೆ ಯಾರ ಸಂಚು ಇದರಲ್ಲಿದೆ ಎಂಬುದು ಗೊತ್ತಾಗಬೇಕು.

ಅಧ್ಯಕ್ಷರು.—ತಾವು ಹೇಳಿದ ಸೂಚನೆ ಅಜೆಂಡಾದಲ್ಲಿ ಬಂದಿಲ್ಲ. ಏತಕ್ಕೆ ಬಂದಿಲ್ಲ ಎಂಬುದನ್ನು ನೋಡಬೇಕಾಗುತ್ತದೆ. ಅಕಸ್ಮಾತ್ತಾಗಿ ಮಿಸ್ಟೇಕ್ ಆಗಿ ಬಿಟ್ಟಿದ್ದರೆ ನೋಡೋಣ.

ಶ್ರೀ ಯಡಿಯೂರಪ್ಪ.—ನನ್ನದೇನೆಂದರೆ.....

ಶ್ರೀ ಪಂಪಾಪತಿ.—ನೀವು ಕುಳಿತುಕೊಳ್ಳಿ. ಸುಮಾರು.....

ಅಧ್ಯಕ್ಷರು.—ಕುಳಿತುಕೊಳ್ಳಿ ಎಂದು ಹೇಳುವುದಕ್ಕೆ ನಿಮಗೆ ಅಧಿಕಾರ ಇಲ್ಲ. ನಾನು ಕನ್ನಡದಲ್ಲಿ ಹೇಳಿದ್ದೇನೋ ಇಂಗ್ಲೀಷಿನಲ್ಲಿ ಹೇಳಿದ್ದೇನೊ? ಬನ್ನಿ ಡಿಸ್‌ಕಸ್ ಮಾಡೋಣ ಎಂದು ಹೇಳಿಲ್ಲವೆ?

ಸಿನಿಮಾ ಮಂದಿರದ ಕಾರ್ಮಿಕರಂಗಳ ಮಂಷ್ಕರ

ಶ್ರೀ ಪಂಪಾಪತಿ.—ಸಿನಿಮಾ ಮಂದಿರದ ಕಾರ್ಮಿಕರು ಏಳು ದಿವಸಗಳಿಂದ ಮುಷ್ಕರ ಮಾಡುತ್ತಿದ್ದಾರೆ. ಹೈಕೋರ್ಟ್ ತೀರ್ಮಾನ ಆಗಿದೆ. ಮೂಲೀಕರು ಅದರಂತೆ ನಡೆಯುತ್ತಿಲ್ಲ. ನಿನ್ನೆಯು ದಿವಸ ಮಂತ್ರಿಗಳು ಸದನದಲ್ಲಿ ಉತ್ತರಿಸುತ್ತೇನೆ ಎಂದು ಹೇಳಿದ್ದರು, ಇವೊತ್ತು ಅನೇಕ ಪ್ರೇಕ್ಷಕರಿಗೆ ಮತ್ತು ಕಾರ್ಮಿಕರಿಗೆ ತೊಂದರೆಯಾಗಿತ್ತಿದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿನ್ನೆಯ ದಿವಸ ಈ ವಿಚಾರ ಪ್ರಸ್ತಾಪ ಆಗಿತ್ತು. ಇದು ತುಂಬಾ ಪ್ರಮುಖವಾದ ಸಂಗತಿ. ಸಿನಿಮಾ ಮಂದಿರಗಳು ಬಂದ್ ಆಗಿರುವುದರಿಂದ ಕಾರ್ಮಿಕರಿಗೆ ತೊಂದರೆಯಾಗಿದೆ. ನಿನ್ನೆ ಕಾರ್ಮಿಕ ಮಂತ್ರಿಗಳು ಉತ್ತರ ಕೊಡುತ್ತೇನೆ ಎಂದು ಹೇಳಿದ್ದರು. ಒಂದು ವೇಳೆ ಉತ್ತರ ಸಿದ್ಧ ಮಾಡಿದ್ದರೆ ದಯವಿಟ್ಟು ಕೊಡುವುದಕ್ಕೆ ಅವರಿಗೆ ಅವಕಾಶ ಕೊಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಡಿ. ಮಂಜುನಾಥ್.—ಶಿಷಿಳರ ಪ್ರಕಾರ ಬೇಕಾದರೆ ನಾಳೆ ಪ್ರಸ್ತಾಪ ಮಾಡಬಹುದು. ಕನ್ಸಿಲಿಯೇಷನ್ ಮೀಟಿಂಗ್ ನಡೆಯುತ್ತಿದೆ. ಸಿನಿಮಾ ಇಂಡಸ್ಟ್ರೀಸ್ ಚೇರ್ಮನ್ನರು ರೆಡ್ಡಿಯವರು ಮತ್ತು ಕಾರ್ಮಿಕ ಮುಖಂಡರು ಕೂಳಿತು ಚರ್ಚೆ ಮಾಡುತ್ತಿದ್ದಾರೆ. ಲೇಬರ್ ಕಮಿಷನರ್ ಅವರಿಗೆ ನಾನು ಹೇಳಿದ್ದೇನೆ. ನಾಳೆ ಬೇಕಾದರೆ ಪೂರ್ತಿ ಸ್ಟೇಟ್‌ಮೆಂಟ್ ಕೊಡುತ್ತೇನೆ.

ಶ್ರೀ ಪಂಪಾಪತಿ.—ಸಮಸ್ಯೆ ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಡಿ. ಮಂಜುನಾಥ್.—ನಾಳೆ ಸ್ಟೇಟ್‌ಮೆಂಟ್ ಕೊಡುತ್ತೇನೆ.

ಮಂತ್ರಿಯವರ ಹೇಳಿಕೆ

ವೇದರು ಮತ್ತು ಬುರುಡ ಜನರಿಗೆ ಪ್ರತಿ ತಿಂಗಳು 100 ಬೊಂಬುಗಳನ್ನು ಕೊಡುವುದು

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಅಧ್ಯಕ್ಷರೆ, ನಿನ್ನೆ ಸೂಳ್ಯದ ಸದಸ್ಯರಾದ ಕುಶಾಲ್ ಅವರು ಒಂದು ವಿಚಾರ ಪ್ರಸ್ತಾಪ ಮಾಡಿದರು. ಅದಕ್ಕೆ ನಾನು ಉತ್ತರ ಕೊಡುತ್ತೇನೆ ಎಂದು ಹೇಳಿದ್ದೆ. ತಾವು ಅನುಮತಿ ಕೊಟ್ಟರೆ ಕೊಡುತ್ತೇನೆ.

ಅದಕರು —ಸರಿ ಕೊಡಿ.